# ಜೆಎಸ್‌ಎಸ್ ಮಹಾವಿದ್ಯಾಪೀಠ

ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004

ದೂರವಾಣಿ : 0821-2548212, ಫ್ಯಾಕ್ಸ್ : 2548218


---

2.11.2021

**ಪ್ರಕಟಣೆಗಾಗಿ**

## ಬಸವಾದಿ ಪ್ರಮಥರು ಕನ್ನಡವನ್ನು ಎತ್ತರಕ್ಕೆ ಏರಿಸಿದವರು
**– ಡಾ. ಶ್ರೀ ಬಸವ ಮರುಳಸಿದ್ಧ ಸ್ವಾಮಿಗಳು**

"ವಚನಗಳು ಕನ್ನಡದ ಅಭಿವ್ಯಕ್ತಿಯ ಸಂಪತ್ತುಗಳು; ಇವು ವಚನಕಾರರ ಹೆಗ್ಗಳಿಕೆ. ಇಷ್ಟಲಿಂಗವನ್ನು ಕೇಂದ್ರವಾಗಿಟ್ಟುಕೊಂಡು ಸಾಧಿಸುವ ಯೋಗಮಾರ್ಗವೇ ಶಿವಯೋಗ" ಎಂದು ಚಿಕ್ಕಮಗಳೂರು ಬಸವತತ್ತ್ವ ಪೀಠ ಹಾಗೂ ಶಿವಮೊಗ್ಗ ಬಸವ ಕೇಂದ್ರದ ಪೀಠಾಧ್ಯಕ್ಷರಾದ ಡಾ. ಶ್ರೀ ಬಸವ ಮರುಳಸಿದ್ಧ ಸ್ವಾಮಿಗಳವರು ಅಭಿಪ್ರಾಯಪಟ್ಟರು.

ನವೆಂಬರ್ 1ರಂದು ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ವತಿಯಿಂದ, ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯಸಾನ್ನಿಧ್ಯದಲ್ಲಿ ಏರ್ಪಡಿಸಿದ್ದ 'ಜ್ಞಾನವಾರಿಧಿ–48' ಡಿಜಿಟಲ್ ಸಾಪ್ತಾಹಿಕ ಉಪನ್ಯಾಸ ಕಾರ್ಯಕ್ರಮದಲ್ಲಿ "ಶಿವಯೋಗದ ಮಹತ್ವ" ಕುರಿತು ಉಪನ್ಯಾಸ ನೀಡಿದ ಶ್ರೀ ಬಸವ ಮರುಳಸಿದ್ಧ ಸ್ವಾಮಿಗಳು, "ಯಾರು ಬೇಕಾದರೂ ಶಿವಯೋಗ ಸಾಧನೆ ಮಾಡಬಹುದು. ಇದೊಂದು ವಿಶಿಷ್ಟ ಯೋಗಪದ್ಧತಿ. ಸಾಮಾಜಿಕ ಮತ್ತು ಆಧ್ಯಾತ್ಮಿಕ ವಿಕಾಸದ ಹಾದಿ ಶಿವಯೋಗ. ದೇವನೊಬ್ಬ ನಾಮ ಹಲವು. ಕಾಯಕ ಮತ್ತು ದಾಸೋಹ ತತ್ತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಇಷ್ಟಲಿಂಗ ಸಾಧನೆಯಲ್ಲಿ ಭಕ್ತಿ ತೃಪ್ತಿಗೊಳ್ಳಬೇಕು. ಭಕ್ತಿಯ ಸಂಭಾಷಣೆಯನ್ನು ಮಾಡಬೇಕು. ಇದರಿಂದ ಶಿವತತ್ತ್ವ ಪ್ರಾಪ್ತಿಯಾಗುತ್ತದೆ" ಎಂದು ತಿಳಿಸಿದರು.

ಇಷ್ಟಲಿಂಗವೆನ್ನುವುದು ಆತ್ಮಸಾಕ್ಷಿಯ ಸ್ವರೂಪ. ಶಿವಯೋಗ ಬದುಕಿನ ಸಹಜವಾದ ನೆಲೆಗಳಲ್ಲಿ ಒಂದಾಗಬೇಕು. ಜೀವಿಯಾಗುವುದು ಸಾಧನೆಯಲ್ಲ, ಶಿವನಾಗುವುದು ಸಾಧನೆ. ಶಿವಯೋಗವು ಅಂಗವನ್ನು ಲಿಂಗವನ್ನಾಗಿ ಮಾಡುತ್ತದೆ. ತನು, ಮನ, ಭಾವಗಳಲ್ಲಿಯೂ ಇಷ್ಟಲಿಂಗ ವ್ಯಾಪಿಸಿರುತ್ತದೆ. ನಮ್ಮೊಳಗಿರುವ ಚಿತ್ಕಳೆಯನ್ನು ಭಾವವನ್ನಾಗಿ ಗ್ರಹಿಸಬೇಕು. ಲಿಂಗಾಂಗಸಾಮರಸ್ಯವನ್ನು ಹೊಂದಬೇಕು. ಇಷ್ಟಲಿಂಗದ ಸಮ್ಮುಖದಲ್ಲಿ ಆತ್ಮಾವಲೋಕನ ಮಾಡಿಕೊಳ್ಳಬೇಕು. ತಪ್ಪು–ಒಪ್ಪುಗಳನ್ನು ವಿಮರ್ಶಿಸಿಕೊಳ್ಳಬೇಕು. ಅಂತರಂಗವನ್ನು ನಿರಂತರವಾಗಿ ಚಿಂತನೆಯ ನಿಕಷಕ್ಕೆ ಒಳಪಡಿಸಿ ನಿತ್ಯವೂ ಶುದ್ಧವಾಗಿರಬೇಕು. ಎಲ್ಲವನ್ನೂ ಲಿಂಗಸ್ವರೂಪಿಯಾಗಿ ಕಾಣುವಂತೆ ಶಿವಯೋಗ ಮಾಡುತ್ತದೆ. ಸಾಧನಮುಖಿಗಳಾಗಿ ಸಾಧಕರು ಸಂಚರಿಸಬೇಕು. ಶಿವಯೋಗಸಾಧನೆಯಿಂದ ಭಿನ್ನತೆಗಳು ನಿವಾರಣೆಯಾಗುತ್ತವೆ ಎಂದರು.

ಉಪನ್ಯಾಸದ ನಂತರ ವೀಕ್ಷಕರ ಆಯ್ದ ಪ್ರಶ್ನೆಗಳಿಗೆ ಉತ್ತರಿಸಲಾಯಿತು. ಆನ್‌ಲೈನ್ ಮೂಲಕ ನಡೆದ ಈ ಕಾರ್ಯಕ್ರಮದಲ್ಲಿ ಆಧ್ಯಾತ್ಮಿಕ ಜಿಜ್ಞಾಸುಗಳು, ಸಾರ್ವಜನಿಕರು ಭಾಗವಹಿಸಿದ್ದರು. ಜೆಎಸ್‌ಎಸ್ ಶಾಲಾ ವಿದ್ಯಾರ್ಥಿಗಳು ನಾಡಗೀತೆಯನ್ನು ಹಾಡುವುದರ ಮೂಲಕ ಪ್ರಾರ್ಥಿಸಿದರು. ಶ್ರೀ ಆರ್.ಎಸ್. ಕುಮಾರ್‌ರವರು ಕಾರ್ಯಕ್ರಮ ನಿರ್ವಹಿಸಿದರು.

ನಿರ್ದೇಶಕರು

ಪ್ರಕಟಣ ವಿಭಾಗ